# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ತಾಹೀರಸಬಾ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ ಇವರು ಜೆ.ಓ.ಸಿ. ಡಿ.ಫಾರ್ಮಸಿ ತರಬೇತಿ ಹೊಂದಿದ್ದು, ಫಾರ್ಮಸಿ ಪರಿಷತ್ತಿನಲ್ಲಿ ನೋಂದಾಯಿಸಲು ಅನುಮತಿ ಕೋರಿರುವುದನ್ನು ತಿರಸ್ಕರಿಸುವ ಬಗ್ಗೆ.

ಓದಲಾಗಿದೆ:
1. ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:51945/2013 (ಇ.ಡಿ.ಎನ್.-ಆರ್.ಇ.ಎಸ್.) ರಲ್ಲಿ ನೀಡಿರುವ ತೀರ್ಪು ದಿನಾಂಕ: 20.08.2014.
2. ಶ್ರೀಮತಿ ತಾಹೀರಸಬಾ ಇವರ ಮನವಿ ದಿನಾಂಕ: 17.11.2014.

***

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1)ರ ತೀರ್ಪಿನಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠವು ಶ್ರೀಮತಿ ತಾಹೀರಸಬಾ ಇವರು ತಾವು ಜೆ.ಓ.ಸಿ., ಡಿ.ಫಾರ್ಮಸಿ ತರಬೇತಿಯನ್ನು ಪಡೆದಿದ್ದು, ತಮಗೆ ಪ್ರಾಕ್ಟೀಕಲ್ ತರಬೇತಿಯನ್ನು ನೀಡಿ, ತಮ್ಮನ್ನು ನೋಂದಾಯಿತ ಫಾರ್ಮಸಿಸ್ಟ್ ಎಂದು ಪರಿಗಣಿಸುವಂತೆ ಭಾರತೀಯ ಫಾರ್ಮಸಿ ಪರಿಷತ್ ಮತ್ತು ಇತರರಿಗೆ ನಿರ್ದೇಶನ ನೀಡುವಂತೆ ಕೋರಿದ್ದ ಅರ್ಜಿಯನ್ನು ವಿಚಾರಣೆ ನಡೆಸಿ ಅಂತಿಮವಾಗಿ ಈ ಕೆಳಕಂಡಂತೆ ಆದೇಶಿಸಿದೆ:-

> "To enable such consideration, liberty is reserved to the petitioner to make an appropriate representation to respondents No.3 and 4 who may after taking note of these aspects the matter before the Chief Secretary, State of Karnataka for taking appropriate decision in the matter".

KARNATAKA STATE PHARMACY COUNCIL No. 614 Date 9/12/2014 BANGALORE

ಮೇಲೆ ಓದಲಾದ ಕ್ರ.ಸಂ. (2)ರ ಮನವಿಯಲ್ಲಿ ಶ್ರೀಮತಿ ತಾಹೀರಸಬಾ ತಂದೆ ಅನ್ವರ್ ಅಹಮದ್, ಸಾಯಿಚೇತನ ಕಿರಿಯ ಪ್ರಾಥಮಿಕ ಶಾಲೆಯ ಹತ್ತಿರ, ಶಾಂತಿ ನಗರ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ ಇವರು ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:51945/2013ರಲ್ಲಿ ದಿನಾಂಕ: 20.08.2014ರಂದು ನೀಡಿರುವ ಆದೇಶದನುಸಾರ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಮನವಿಯನ್ನು ಸಲ್ಲಿಸಿ, ತಾವು 2 ವರ್ಷಗಳ ಜೆ.ಓ.ಸಿ. ಡಿ.ಫಾರ್ಮಸಿ ತರಬೇತಿಯನ್ನು ಪಡೆದು, 1996ರ ಮೇ ಮಾಹೆಯಲ್ಲಿ ಅನಂತರ ಸರ್ಕಾರಿ ಪತ್ರಗಳಲ್ಲಿ 03 ತಿಂಗಳ ಪ್ರಾಕ್ಟಿಕಲ್ ತರಬೇತಿ ಪಡೆಯಬೇಕಾಗಿದ್ದು, ಅದಕ್ಕೆ ಅವಕಾಶ ನಿರಾಕರಿಸಿದ ಕಾರಣ ತರಬೇತಿ ಪಡೆಯಲಾಗಿರುವುದಿಲ್ಲ. ಇದರಿಂದ ಫಾರ್ಮಸಿ ಪರಿಷತ್, ಬೆಂಗಳೂರು ಇಲ್ಲಿ ನೋಂದಣಿ ಮಾಡಲು ನಿರಾಕರಿಸಲಾಗಿದೆ. ತಾವು ಸ್ವತಂತ್ರ ಉದ್ಯೋಗ ಮಾಡಲು ಮೆಡಿಕಲ್ ಸ್ಟೋರ್ ತೆರೆಯಲು ಇಚ್ಛಿಸಿದ್ದು, ತಮಗೆ ಫಾರ್ಮಸಿ ಪರಿಷತ್ತಿನಲ್ಲಿ ಫಾರ್ಮಸಿಸ್ಟ್ ಎಂದು ನೋಂದಾಯಿಸಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ.

ಶ್ರೀಮತಿ ತಾಹೀರಸಬಾ ಇವರ ಮನವಿ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ರಾಜ್ಯ ವೃತ್ತಿಪರ ಶಿಕ್ಷಣ ಪರಿಷತ್ ನಡೆಸುವ ಪದವಿ ಪೂರ್ವ ವೃತ್ತಿಪರ ಕೋರ್ಸ್ ಶಿಕ್ಷಣವು ಪರೀಕ್ಷಾ ಪ್ರಾಧಿಕಾರ ಮಂಡಳಿ ನಡೆಸುವ ಡಿ.ಫಾರ್ಮ ಶಿಕ್ಷಣಕ್ಕೆ ಸಮಾನವಾಗಿಲ್ಲವಾದ್ದರಿಂದ ಹಾಗೂ ಭಾರತೀಯ ಫಾರ್ಮಸಿ ಪರಿಷತ್ತಿನ ಎಜುಕೇಷನ್ ರೆಗ್ಯುಲೇಷನ್ಸ್ 1991ರ ಪಠ್ಯ ಕ್ರಮದ ಪ್ರಕಾರ ಇಲ್ಲವಾದ್ದರಿಂದ, ಈ ಶಿಕ್ಷಣವನ್ನು ಪೂರೈಸಿದ

. . . 2

ಅಭ್ಯರ್ಥಿಗಳನ್ನು ಫಾರ್ಮಸಿ ಕಾಯ್ದೆ 1948ರಡಿಯಲ್ಲಿ ನೋಂದಾಯಿತ ಫಾರ್ಮಸಿಸ್ಟ್ ಆಗಿ ನೋಂದಾಯಿಸಲು ಅವಕಾಶವಿಲ್ಲದಿರುವುದರಿಂದ, ಶ್ರೀಮತಿ ತಾಹೀರಸಬಾ ಇವರ ಮನವಿಯನ್ನು ತಿರಸ್ಕರಿಸಲು ನಿರ್ಧರಿಸಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 04 ಪಿಟಿಡಿ 2014, ಬೆಂಗಳೂರು, ದಿನಾಂಕ:27.10.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ರಾಜ್ಯ ವೃತ್ತಿಪರ ಶಿಕ್ಷಣ ಪರಿಷತ್ ನಡೆಸುವ ಪದವಿ ಪೂರ್ವ ವೃತ್ತಿಪರ ಕೋರ್ಸ್ ಶಿಕ್ಷಣವು ಪರೀಕ್ಷಾ ಪ್ರಾಧಿಕಾರ ಮಂಡಳಿ ನಡೆಸುವ ಡಿ.ಫಾರ್ಮ ಶಿಕ್ಷಣಕ್ಕೆ ಸಮಾನವಾಗಿಲ್ಲವಾದ್ದರಿಂದ ಹಾಗೂ ಭಾರತೀಯ ಫಾರ್ಮಸಿ ಪರಿಷತ್ತಿನ ಎಜುಕೇಷನ್ ರೆಗ್ಯುಲೇಷನ್ಸ್ 1991ರ ಪಠ್ಯ ಕ್ರಮದ ಪ್ರಕಾರ ಇಲ್ಲವಾದ್ದರಿಂದ, ಈ ಶಿಕ್ಷಣವನ್ನು ಪೂರೈಸಿದ ಅಭ್ಯರ್ಥಿಗಳನ್ನು ಫಾರ್ಮಸಿ ಕಾಯ್ದೆ 1948ರಡಿಯಲ್ಲಿ ನೋಂದಾಯಿತ ಫಾರ್ಮಸಿಸ್ಟ್ ಆಗಿ ನೋಂದಾಯಿಸಲು ಅವಕಾಶವಿಲ್ಲದಿರುವುದರಿಂದ, ನೋಂದಾಯಿತ ಫಾರ್ಮಸಿಸ್ಟ್ ಎಂದು ಪರಿಗಣಿಸುವಂತೆ ಕೋರಿರುವ ಶ್ರೀಮತಿ ತಾಹೀರಸಬಾ ಇವರ ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)
(ದೂರವಾಣಿ ಸಂಖ್ಯೆ:22034292)

**ಇವರಿಗೆ:**

1) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಪಿ.ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ, ಬೆಂಗಳೂರು-27.
3) ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಫಾರ್ಮಸಿ ಪರಿಷತ್, ನಂ. 514/ಇ, 1ನೇ ಮೇನ್, ವಿಜಯನಗರ ಕ್ಲಬ್ ರಸ್ತೆ, ವಿಜಯನಗರ, 2ನೇ ಹಂತ, ಬೆಂಗಳೂರು-104.
4) ಶ್ರೀಮತಿ ತಾಹೀರಸಬಾ ತಂದೆ ಅನ್ವರ್ ಅಹಮದ್, ಸಾಯಿಚೇತನ ಕಿರಿಯ ಪ್ರಾಥಮಿಕ ಶಾಲೆಯ ಹತ್ತಿರ, ಶಾಂತಿ ನಗರ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ-577 522.

**ಪ್ರತಿಗಳು:-**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ.
3. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.